**ICSE SEMESTER I EXAMINATION**
**SPECIMEN QUESTION PAPER**
**KANNADA**

**(Second Language)**

*Maximum Marks: 40*

*Time allowed: One and a half hour (Inclusive of reading time).*

*The marks intended for questions are given in brackets [ ].*

---

***Select the correct option for each of the following questions.***

---

## SECTION-A

**Four choices are given for each of the questions/incomplete statements. Choose the correct answer and put the tick mark (√) for the correct choice.**

***ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ (√).***

### LANGUAGE (20 Marks)

**(ಭಾಷೆ)**

**Question 1**

**Read the following passage carefully and choose the correct answer and put tick mark. (√)** **[10×1=10]**

***ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅನಂತರ ಕೇಳಲಾದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ. (√)***

ಹಿಮಾಲಯದ ತಪ್ಪಲಿನಲ್ಲಿ ಬಿಳಿಯ ಆನೆಯೊಂದು ವಾಸವಾಗಿತ್ತು. ಅದು ಸೌಮ್ಯ ಸ್ವಭಾವದ ಆನೆಯಾಗಿತ್ತು. ಯಾರೊಂದಿಗೂ ಜಗಳ ಕಾಯದೆ ಸದಾ ಒಂಟಿಯಾಗಿ ಇದ್ದುಕೊಂಡು ಕಾಲವನ್ನು ಕಳೆಯುತ್ತಿತ್ತು. ಒಮ್ಮೆ ಬೇಡನೊಬ್ಬನು ದಾರಿ ತಪ್ಪಿ ಆ ಕಾಡಿನೊಳಗೆ ಬಂದನು. ಧೀರ ಆಕೃತಿಯ ಆನೆಯನ್ನು ನೋಡಿ ಹೆದರಿ ಓಡತೊಡಗಿದನು. ಆನೆಯು ಅವನನ್ನು ಕೂಗಿ ಕರೆದು, ತನ್ನ ಮನೆಗೆ ಕರೆದೊಯ್ದಿತು. ಹಣ್ಣು, ಹಂಪಲುಗಳನ್ನು ಕೊಟ್ಟು ಆದರಿಸಿತು. ಅವನನ್ನು ತನ್ನ ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಅವನ ದೇಶವಾದ ಕಾಶಿಯವರೆಗೂ ಕರೆದೊಯ್ದು ಬಿಟ್ಟಿತು. ಹಿಂದಿರುಗುವ ಮುಂಚೆ ಅತಿಥಿಗೆ ಕೊಡಲು ಏನೂ ಇಲ್ಲವಲ್ಲ ಎಂದು ಸಂಕೋಚಪಟ್ಟಿತು.

ಊರು ಸೇರಿದ ಬೇಡನಿಗೆ ಪೇಟೆಯಲ್ಲಿ ದಂತದ ವಿಗ್ರಹ ಕೊರೆಯುತ್ತಿದ್ದ ವ್ಯಾಪಾರಿಗಳು ಸಿಕ್ಕಿದರು. ವ್ಯಾಪಾರಿಗಳಿಂದ ಆನೆಯ ದಂತವು ಬಹಳ ಬೆಲೆಬಾಳುವಂಥದ್ದು ಎಂಬುದನ್ನು ಅರಿತನು.

ಬೇಡನಿಗೆ ಆನೆಯ ನೆನಪಾಯಿತು. ಆನೆಯ ದಂತ ದೊರೆತರೆ ಬೇಗ ಐಶ್ವರ್ಯವಂತನಾಗಬಹುದೆಂದು ಯೋಚಿಸಿ. ಹಿಮಾಲಯದ ತಪ್ಪಲಿಗೆ ಹೋದನು. ಬಿಳಿಯ ಆನೆ ಅವನಿಗೆ ಸಿಕ್ಕಿತು. ಅದು ಅವನನ್ನು ಏಕೆ ಬಂದೆ? ಎಂದು ಪ್ರಶ್ನಿಸಿತು.

ಅದಕ್ಕೆ ಬೇಡನು "ಆನೆಯೇ, ನೀನು ದಾನದಲ್ಲಿ ಕರ್ಣನಂತೆ ಎಂದು ಕೇಳಿದ್ದೇನೆ. ನಾನು ಬಹಳ ಬಡವ, ನನ್ನ ಹೆಂಡತಿ ಮಕ್ಕಳು ಉಪವಾಸ ಬಿದ್ದಿದ್ದಾರೆ, ನೀನು ಕರುಣೆಯಿಟ್ಟು ದಂತವನ್ನು ದಾನ ಮಾಡಿದರೆ ನಿನಗೆ ಪುಣ್ಯ ಬರುತ್ತದೆ." ಎಂದು ಅಂಗಲಾಚಿ ಬೇಡಿದನು.

ಆನೆಯು ಒಪ್ಪಲು, ಬೇಡನು ದಂತವನ್ನು ಬುಡಮಟ್ಟ ಕೊಯ್ಯಬೇಕೆಂಬ ಆಸೆಯಿಂದ ಆಳವಾಗಿ ಕೊಯ್ದನು. ನೋವಿನಿಂದ ಕಣ್ಣಲ್ಲಿ ನೀರು ಬಂದರೂ ಆನೆ ಮೌನವಾಗಿ ಕುಳಿತಿತು. ಬೇಡನು ರಕ್ತಮಯವಾದ ದಂತಗಳನ್ನು ಕಿತ್ತುಕೊಂಡು ನೀರಲ್ಲಿ ತೊಳೆದು ತನ್ನ ರಾಜ್ಯದತ್ತ ಹೊರಟನು.

ಭೂಮಿ ತಾಯಿಯು "ಇಂತಹ ನೀಚನು ಇನ್ನು ಬದುಕಿರಬಾರದು" ಎಂದು ಬಾಯಿ ಬಿಡಲು ಅದರೊಳಗಿನ ಬೆಂಕಿಯು ಅವನನ್ನು ದಹಿಸಿತು. ತ್ಯಾಗ ಜೀವಿಯಾದ ಆನೆಯು ಸ್ವರ್ಗಕ್ಕೆ ಹೋಯಿತು.

***ಪ್ರಶ್ನೆಗಳು:–***

(i) ಆನೆಯ ಸ್ವಭಾವವು ———— ವಾಗಿತ್ತು.

(ಅ) ಕ್ರೂರ (ಆ) ಸೌಮ್ಯ

(ಇ) ಮೃದು (ಈ) ಕೋಮಲ

(ii) ದಾರಿ ತಪ್ಪಿ ಕಾಡಿನೊಳಗೆ ಬಂದವರು.

(ಅ) ಬೇಡ (ಆ) ವ್ಯಾಪಾರಿ

(ಇ) ಆನೆ (ಈ) ಬಡವ

(iii) ಬೇಡನು ———— ದೇಶಕ್ಕೆ ಸೇರಿದವನಾಗಿದ್ದನು?

(ಅ) ಕಾಶ್ಮೀರ (ಆ) ಹಿಮಾಚಲ

(ಇ) ಕಾಶಿ (ಈ) ಕುಂತಳ

(iv) ಬೇಡನಿಗೆ ಪೇಟೆಯಲ್ಲಿ ಸಿಕ್ಕಿದವರು ಯಾರು?

(ಅ) ವ್ಯಾಪಾರಿಗಳು (ಆ) ಊರ ಜನರು

(ಇ) ಅತಿಥಿಗಳು (ಈ) ದಂತ ಕದಿಯುವವರು

(v) ಬೇಡನು ಐಶ್ವರ್ಯವಂತನಾಗಲು ಎಲ್ಲಿಗೆ ಹೋಗಲು ನಿರ್ಧರಿಸಿದನು?

(ಅ) ಪರ್ವತದ ತಪ್ಪಲಿಗೆ (ಆ) ಕಾಶಿ ದೇಶಕ್ಕೆ

(ಇ) ಹಿಮಾಲಯದ ತಪ್ಪಲಿಗೆ (ಈ) ಶ್ರೀಮಂತರ ಹತ್ತಿರಕ್ಕೆ

(vi) ಬೇಡನು ಆನೆಯ ದಂತವನ್ನು ಕೊಯ್ದ ಬಗೆ ————

(ಅ) ಅರ್ಧ (ಆ) ನೀಳವಾಗಿ

(ಇ) ಕಾಲುಭಾಗ (ಈ) ಆಳವಾಗಿ

(vii) ಆನೆಯು ನೋವನ್ನು ಹೇಗೆ ಸಹಿಸಿಕೊಂಡಿತು?

(ಅ) ಮೌನವಾಗಿ (ಆ) ಸಂತೋಷದಿಂದ

(ಇ) ದುಃಖದಿಂದ (ಈ) ತಾಳ್ಮೆಯಿಂದ

(viii) ಭೂಮಿ ತಾಯಿಯು ಬಾಯಿ ಬಿಟ್ಟಾಗ ———— ಹೊರಬಂದಿತು.

(ಅ) ವಿಷ (ಆ) ಅಮೃತ

(ಇ) ಬೆಂಕಿ (ಈ) ಜ್ವಾಲಾಮುಖಿ

(ix) ದಂತತ್ಯಾಗ ಮಾಡಿದ ಆನೆ ಕೊನೆಗೆ ಎಲ್ಲಿಗೆ ಹೋಯಿತು?

(ಅ) ಪಾತಾಳ ಲೋಕಕ್ಕೆ (ಆ) ನರಕಕ್ಕೆ

(ಇ) ಭೂಲೋಕಕ್ಕೆ (ಈ) ಸ್ವರ್ಗಕ್ಕೆ

(x) ಈ ಕಥೆಗೆ ಸರಿಹೊಂದುವ ಶೀರ್ಷಿಕೆಯನ್ನು ಗುರುತಿಸಿ.

(ಅ) ಬೂದು ಬಣ್ಣದ ಆನೆ (ಆ) ತ್ಯಾಗಜೀವಿ ಆನೆ

(ಇ) ಜಗಳ ಕಾಯುವ ಆನೆ (ಈ) ಕಪ್ಪು ಆನೆ

**Question 2**

**Read the following questions carefully and choose the correct answer and put tick mark. (√)** **[10×1=10]**

***ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಓದಿ ಸರಿಯಾದ ಉತ್ತರವನ್ನು ಗುರುತಿಸಿ. (√)***

(i) ರವಿ – ಇದರ ಸಮಾನಾರ್ಥಕ ಪದ.

(ಅ) ಆದಿತ್ಯ (ಆ) ಚಂದ್ರ

(ಇ) ನಕ್ಷತ್ರ (ಈ) ಆಕಾಶ

(ii) ಆದಿ – ಪದದ ವಿರುದ್ಧಾರ್ಥಕ ಪದ.

(ಅ) ಪ್ರಾರಂಭ (ಆ) ಅಂತ್ಯ

(ಇ) ಮೊದಲು (ಈ) ಆರಂಭ

(iii) ಯುವಕ – ಪದದ ಅನ್ಯಲಿಂಗ.

(ಅ) ಯುವಕಿ (ಆ) ಯುವಕಿಯರು

(ಇ) ಯುವಕರು (ಈ) ಯುವತಿ

(iv) ಮಗು – ಪದದ ಬಹುವಚನ ರೂಪ.

(ಅ) ಮಕ್ಕಳಂದಿರು (ಆ) ಮಗುಗಳು

(ಇ) ಮಕ್ಕಳು (ಈ) ಮಗಗಳು

(v) ಗುಂಪಿಗೆ ಸೇರದ ಪದವನ್ನು ಗುರುತಿಸಿ.

(ಅ) ಪೀಡಿಸು (ಆ) ಕಾಡು

(ಇ) ಅಡವಿ (ಈ) ಅರಣ್ಯ

(vi) ಸಜ್ಜನರ ಸಂಗ ———— ಈ ಗಾದೆ ಮಾತನ್ನು ಪೂರ್ಣಗೊಳಿಸಿ.

(ಅ) ಬೆಲ್ಲ ಸವಿದಂತೆ (ಆ) ಹೆಜ್ಜೇನು ಸವಿದಂತೆ

(ಇ) ಸಕ್ಕರೆ ಸವಿದಂತೆ (ಈ) ಹಾಲು ಸವಿದಂತೆ

(vii) ಸರಿಯಾದ ವಾಕ್ಯವನ್ನು ಗುರುತಿಸಿ.

(ಅ) ಶಾಲೆಯ ಈಜುಕೊಳದಲ್ಲಿ ಆಡುತ್ತಿದ್ದಾರೆ ಮಕ್ಕಳು

(ಆ) ಈಜುಕೊಳದಲ್ಲಿ ಮಕ್ಕಳು ಆಡುತ್ತಿದ್ದಾರೆ ಶಾಲೆಯ

(ಇ) ಆಡುತ್ತಿದ್ದಾರೆ ಮಕ್ಕಳು ಶಾಲೆಯ ಈಜುಕೊಳದಲ್ಲಿ

(ಈ) ಮಕ್ಕಳು ಶಾಲೆಯ ಈಜುಕೊಳದಲ್ಲಿ ಆಡುತ್ತಿದ್ದಾರೆ

(viii) ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಆರಿಸಿ ವಾಕ್ಯವನ್ನು ಪೂರ್ಣಗೊಳಿಸಿ.

ಶಿಕ್ಷಕರು (ಮಕ್ಕಳು) ——— (ಪಾಠ) —— ಮಾಡುತ್ತಿದ್ದಾರೆ.

(ಅ) ಮಕ್ಕಳಿಗೆ – ಪಾಠವನ್ನು (ಆ) ಮಕ್ಕಳಿಂದ – ಪಾಠವನ್ನು

(ಇ) ಮಕ್ಕಳಲ್ಲಿ – ಪಾಠಕ್ಕೆ (ಈ) ಮಗುಗೆ – ಪಾಠ

(ix) ನನ್ನ ಅಕ್ಕ ವಿದೇಶದಿಂದ <u>ಬರುತ್ತಾಳೆ.</u> ಗೆರೆ ಎಳೆದ ಪದದ ಕಾಲವನ್ನು ಗುರುತಿಸಿ.

(ಅ) ಭೂತಕಾಲ (ಆ) ವರ್ತಮಾನ ಕಾಲ

(ಇ) ಭವಿಷ್ಯತ್ ಕಾಲ (ಈ) ಯಾವುದೂ ಅಲ್ಲ

(x) ಮಗು ಕಾಲು ಜಾರಿ ಬಿದ್ದು ಕೂಗಿಕೊಂಡಿತು. ಸರಿಯಾದ ಪ್ರಶ್ನಾರ್ಥಕ ವಾಕ್ಯವನ್ನು ಗುರುತಿಸಿ.

(ಅ) ಮಗು ಕಾಲು ಜಾರಿ ಬಿದ್ದು ಕೂಗಿಕೊಂಡಿತು?

(ಆ) ಮಗು ಕಾಲು ಜಾರಿ ಕೂಗಿಕೊಂಡಿತು?

(ಇ) ಕೂಗಿಕೊಂಡಿತು ಮಗು?

(ಈ) ಕಾಲು ಜಾರಿ ಬಿದ್ದು ಕೂಗಿಕೊಂಡದ್ದು ಯಾರು?

## SECTION-B

### LITERATURE (20 Marks)

(ಸಾಹಿತ್ಯ)

*(Attempt questions from any two of the following you have studied)*

ಸಾಹಿತ್ಯ ಸಂಗಮ – ಸಣ್ಣಕಥೆಗಳು

### SAHITYA SANGAMA - SHORT STORIES

**Question 3**

**Read the following questions carefully and choose the correct answer and put tick mark. (√)** **[10×1=10]**

*ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ.* (√)

(i) ಶಿವಭೂತಿ ಕಥೆಯಿಂದ ತಿಳಿದು ಬರುವ ನೀತಿ.

(ಅ) ಬುದ್ಧಿಮಾತನ್ನು ಕೇಳಬಾರದು (ಆ) ನಮ್ಮ ಪಾಡಿಗೆ ನಾವು ಬದುಕಬೇಕು

(ಇ) ದುಷ್ಟರ ಸಹವಾಸ ಕೆಟ್ಟದ್ದು (ಈ) ವಸ್ತುಗಳ ಮೇಲೆ ಆಸೆ ಇರಬೇಕು

(ii) ರಾಜನು ಶಿವಭೂತಿಯನ್ನು ಕೆಳಗಿನ ಕಾರಣಕ್ಕೆ ಸೆರೆಮನೆಗೆ ಹಾಕಿದನು.

(ಅ) ಬೇಡನು ಚಾಡಿ ಹೇಳಿದ್ದಕ್ಕೆ (ಆ) ಒಡವೆಗಳನ್ನು ಕದ್ದಿರುವುದಕ್ಕೆ

(ಇ) ಬೇಡನ ದೀನತೆಗೆ (ಈ) ಬೇಡನಿಗೆ ಒಡವೆ ತೋರಿಸಿದ್ದಕ್ಕೆ

(iii) ರಾಜ್ಯದಲ್ಲಿ ಕೋಲಾಹಲ ಉಂಟಾಗಲು ಕಾರಣವಾದ ವಸ್ತು ————

(ಅ) ವಜ್ರದ ಹರಳು (ಆ) ವಜ್ರದ ಹಾರ

(ಇ) ಮಾಂಗಲ್ಯ ಸರ (ಈ) ಧನಕನಕ

(iv) ದೀಪಾವಳಿಯ ಮಹಿಮೆಯು ———— ಕಥೆಯಾಗಿದೆ.

(ಅ) ಚಾರಿತ್ರಿಕ (ಆ) ಪೌರಾಣಿಕ

(ಇ) ನವ್ಯಕಥೆ (ಈ) ಜನಪದ

(v) "ಸ್ವಾಮೀ, ನಮಗೆ ಅಂತ್ಯಕಾಲವು ಬಂದಿದೆ" ಎಂದು ಯಾರು ಯಾರಿಗೆ ಹೇಳಿದರು?

(ಅ) ಪಾರಿವಾಳವು ಬೇಡನಿಗೆ (ಆ) ಹೆಣ್ಣು ಪಾರಿವಾಳವು ಗಂಡು ಪಾರಿವಾಳಕ್ಕೆ

(ಇ) ಬೇಡನು ಪಾರಿವಾಳಕ್ಕೆ (ಈ) ಗಂಡು ಪಾರಿವಾಳವು ಹೆಣ್ಣು ಪಾರಿವಾಳಕ್ಕೆ

(vi) ಕೆಳಗಿನ ಜೀವಿಗಳಲ್ಲಿ ಯಾವುದು ತನ್ನ ತಾಯಿಯನ್ನೇ ತಿಂದು ಬದುಕುತ್ತದೆ?

(ಅ) ಆಮೆ (ಆ) ಹಸು

(ಇ) ಕೃಷ್ಣಮೃಗ (ಈ) ಮೊಸಳೆ

(vii) ಧೈರ್ಯದ ಸಹಚರ ಯಾರು?

(ಅ) ವಿಪತ್ತು (ಆ) ಅಧೈರ್ಯ

(ಇ) ತಾಳ್ಮೆ (ಈ) ಸಂತೋಷ

(viii) ಚದುರಂಗರವರ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ.

(ಅ) ಸರ್ವಮಂಗಳಾ (ಆ) ವೈಶಾಖ

(ಇ) ಉಯ್ಯಾಲೆ (ಈ) ಬಂಗಾರದ ಗೆಜ್ಜೆ

(ix) ಜನಾರ್ಧನನನ್ನು ನೋಡಿದ ಕರೀಮನಿಗೆ ———— ನೆನಪಾಯಿತು.

(ಅ) ಶಾಲೆ (ಆ) ಚಿಣ್ಣಿದಾಂಡು

(ಇ) ಮಂಡಿಪೇಟೆ (ಈ) ಗೋಲಿ ಆಟ

(x) ಬೀಡಿ ಕಾರ್ಖಾನೆಯಲ್ಲಿ ಕರೀಮನ ಕೆಲಸವೇನಾಗಿತ್ತು?

(ಅ) ಬೀಡಿ ಕಟ್ಟುವುದು (ಆ) ಕಸ ಗುಡಿಸುವುದು

(ಇ) ಹೊಗೆಸೊಪ್ಪು ತುಂಬುವುದು (ಈ) ಎಲೆಗಳನ್ನು ಕತ್ತರಿಸುವುದು

## *ಸಾಹಿತ್ಯ ಸಂಗಮ – ಕವನಗಳು*

## SAHITYA SANGAMA - POEMS

**Question 4**

**Read the following questions carefully and choose the correct answer and put tick mark. (√)** **[10×1=10]**

***ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ. (√)***

(i) ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿ ಮಾಡಿಕೊಳ್ಳುವುದು ಹೇಗೆ?

(ಅ) ಕಳ್ಳತನ ಮಾಡಬೇಕು (ಆ) ಸುಳ್ಳು ಹೇಳಬಾರದು

(ಇ) ಕೋಪಿಸಿಕೊಳ್ಳಬೇಕು (ಈ) ತನ್ನನ್ನು ಹೊಗಳಿಕೊಳ್ಳಬೇಕು

(ii) ಎಂತಹವರನ್ನು ದೇವರು ಮೆಚ್ಚುವುದಿಲ್ಲ?

(ಅ) ಗೆಳೆಯರ ದುಃಖಕ್ಕೆ ಅಳುವವರನ್ನು (ಆ) ಮನೆಯವರ ದುಃಖಕ್ಕೆ ಅಳುವವರನ್ನು

(ಇ) ನೆರೆದವರ ದುಃಖಕ್ಕೆ ಅಳುವವರನ್ನು (ಈ) ಪರರ ದುಃಖಕ್ಕೆ ಅಳುವವರನ್ನು

(iii) ಅಕ್ಕಮಹಾದೇವಿಯ ಜನ್ಮಸ್ಥಳ.

(ಅ) ಉಡುತಡಿ (ಆ) ಬಸವ ಕಲ್ಯಾಣ

(ಇ) ಬಳ್ಳಿಗಾವಿ (ಈ) ಬನವಾಸಿ

(iv) ಕುಮಾರವ್ಯಾಸನ ಮೂಲ ಹೆಸರು ——————

(ಅ) ವೀರನಾರಾಯಣ (ಆ) ನಾರಣಪ್ಪ

(ಇ) ಕುಮಾರರಾಮ (ಈ) ರಾಮನಾರಾಯಣ

(v) ಭೀಮನು ಬಕಾಸುರನನ್ನು ತಿವಿದಾಗ ಉಂಟಾದ ಪರಿಣಾಮ.

(ಅ) ಕಾಲು ಮುರಿಯಿತು (ಆ) ಬೆನ್ನು ಮುರಿಯಿತು

(ಇ) ಸೊಂಟ ಮುರಿಯಿತು (ಈ) ಪಕ್ಕೆಲುಬು ಪುಡಿಯಾಯಿತು

(vi) ತಿರುಕನು ಒರಗಿ ಕುಳಿತುಕೊಂಡಿದ್ದ ಸ್ಥಳ ——————

(ಅ) ಹಾಳು ಮಂಟಪ (ಆ) ಧರ್ಮಶಾಲೆ

(ಇ) ಮುರುಕು ಮನೆ (ಈ) ಅರಮನೆ

(vii) 'ಭಟ್ಟನಿಗಳು' ಎಂದರೆ ——————

(ಅ) ಹೊಗಳು ಭಟ್ಟರು (ಆ) ಭಟರು

(ಇ) ಹೆಂಡತಿಯರು (ಈ) ಅಡುಗೆ ಭಟ್ಟರು

(viii) ಜನಪದರು ಎಂದರೆ ಯಾರು?

(ಅ) ಕಾಡಿನ ಜನರು (ಆ) ಪಟ್ಟಣದ ಜನರು

(ಇ) ವಿದೇಶಿಯ ಜನರು (ಈ) ಗ್ರಾಮೀಣ ಜನರು

(ix) ತವರೂರಿನ ದಾರಿಯಲ್ಲಿ ಯಾರಿಗಾಗಿ ಬಾವಿಯನ್ನು ತೆಗೆಸಬೇಕೆಂದು ಹೇಳಲಾಗಿದೆ.

(ಅ) ಅಕ್ಕ ತಂಗಿಯರಿಗೆ (ಆ) ತಂದೆ ತಾಯಿಗೆ

(ಇ) ಅಣ್ಣ ತಮ್ಮಂದಿರಿಗೆ (ಈ) ಬಂಧು ಬಾಂಧವರಿಗೆ

(x) ಗರತಿಯು ತನ್ನ ಕಂದನು —————— ಆಗಬೇಕೆಂದು ಬಯಸುತ್ತಾಳೆ.

(ಅ) ಶ್ರೀಮಂತ (ಆ) ಸಾಹುಕಾರ

(ಇ) ಜ್ಯೋತಿ (ಈ) ಹಣವಂತ

## ಕಾದಂಬರಿ – ನಾಟ್ಯಮಯೂರಿ

## NOVEL - NATYAMAYURI

### ಶ್ರೀ. ಸಾ. ಶಿ. ಮರುಳಯ್ಯ

### (Shri. Sa. Shi. Marulayya)

**Question 5**

**Read the following questions carefully and choose the correct answer and put tick mark. (√)** **[10×1=10]**

***ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ. (√)***

(i) 'ಕ್ಷಮಿಸಿ' ಎಂಬ ಮಾತು ಎಲ್ಲಿಂದ ಕೇಳಿಬಂದಿತು?

(ಅ) ಪ್ರಾಂಗಣದ ಒಳಗಿನಿಂದ (ಆ) ಪ್ರಾಂಗಣದ ಹಿಂದಿನಿಂದ

(ಇ) ಪ್ರಾಂಗಣದ ಹೊರಗಿನಿಂದ (ಈ) ಪ್ರಾಂಗಣದ ಕೆಳಗಿನಿಂದ

(ii) ಹೊನ್ನಮ್ಮ ದೇವಿಯ ದರ್ಶನ ಪಡೆದು ದ್ವಾರಸಮುದ್ರಕ್ಕೆ ಹೊರಟವರು.

(ಅ) ಮಾರಸಿಂಗಮಯ್ಯ (ಆ) ಶಾಂತಲೆ

(ಇ) ಬಾಚಿಮಯ್ಯ (ಈ) ವಿಷ್ಣುವರ್ಧನ

(iii) ಶಾಂತಲೆಯ ವಿದ್ಯಾಗುರುಗಳು ——————

(ಅ) ಶ್ರೀ ಚಂದ್ರಕೀರ್ತಿ ಭಟ್ಟಾರಕರು (ಆ) ಶ್ರೀ ಸೂರ್ಯಕೀರ್ತಿ ಭಟ್ಟಾರಕರು

(ಇ) ಶ್ರೀ ಚಾರುಕೀರ್ತಿ ಭಟ್ಟಾರಕರು (ಈ) ನೇಮಿಚಂದ್ರ ಭಟ್ಟಾರಕರು

(iv) ಬಾಂಧವ್ಯದ ಮೂಲಕ ಸ್ನೇಹವನ್ನು ಹೆಚ್ಚಿಸಿಕೊಳ್ಳಲು ಬಯಸಿದವರು.

(ಅ) ಚಾಲುಕ್ಯರು (ಆ) ಕದಂಬರು

(ಇ) ನೊಳಂಬರು (ಈ) ಹೊಯ್ಸಳರು

(v) "ಹಿಂದಿನ ಜನ್ಮದಲ್ಲಿ ಕಪ್ಪೆಗಿಪ್ಪೆ ಆಗಿ ಹುಟ್ಟಿದ್ದೀಯಾ" – ಈ ಮಾತನ್ನು ಯಾರು ಯಾರಿಗೆ ಹೇಳಿದರು?

(ಅ) ವಿಷ್ಣುವರ್ಧನ – ಉದಯಾದಿತ್ಯ (ಆ) ವಿಷ್ಣುವರ್ಧನ – ಬಪ್ಪರಸ

(ಇ) ಎರೆಯಂಗ – ಮಾರಸಿಂಗಮಯ್ಯ (ಈ) ಬಪ್ಪರಸ – ವಿಷ್ಣುವರ್ಧನ

(vi) ಪಲ್ಲವ ಚಕ್ರವರ್ತಿಯ ಮಗಳ ಹೆಸರು ——————

(ಅ) ಬೊಮ್ಮಲೆ (ಆ) ಸೋಮಲೆ

(ಇ) ರಾಜಲೆ (ಈ) ಬಿಜ್ಜಲೆ

(vii) ರಾಜಧಾನಿಯಿಂದ ಶಾಂತಲೆಗೆ ಬಂದ ಉಡುಗೊರೆಯಲ್ಲಿ ——— ಇದ್ದವು.

(ಅ) ದೇವಾಲಯದ ಚಿತ್ರಗಳು (ಆ) ನಾಟ್ಯದ ವಿವಿಧ ಭಂಗಿಗಳ ಚಿತ್ರಗಳು

(ಇ) ನಾಟಕದ ಚಿತ್ರಗಳು (ಈ) ಅರಮನೆಯ ಚಿತ್ರಗಳು

(viii) ವಿಜಯದ ಕುರುಹಾಗಿ ನಿರ್ಮಿಸಬೇಕೆಂದಿರುವ ದೇವಾಲಯ ——— ಆಗಿತ್ತು.

(ಅ) ಚೆಲುವನಾರಾಯಣ (ಆ) ಶಾಂತಲೇಶ್ವರ

(ಇ) ಹೊಯ್ಸಳೇಶ್ವರ (ಈ) ವಿಜಯನಾರಾಯಣ

(ix) 'ಕೂಡಿ ಬಾಳುವುದರಲ್ಲಿ ನನಗೆ ವಿಶೇಷ ಒಲವಿದೆ' – ಈ ಮಾತನ್ನು ಯಾರು ಯಾರಿಗೆ ಹೇಳಿದರು?

(ಅ) ಶಾಂತಲೆ – ವಿಷ್ಣುವರ್ಧನನಿಗೆ (ಆ) ರಾಜಮಾತೆ – ಮಾಚಿಕಬ್ಬೆಗೆ

(ಇ) ಶಾಂತಲೆ – ರಾಜಮಾತೆಗೆ (ಈ) ರಾಜಮಾತೆ – ಶಾಂತಲೆಗೆ

(x) ಮಹಾಮಂತ್ರಿಯನ್ನಾಗಿ ——— ಆರಿಸಲಾಯಿತು.

(ಅ) ಗಂಗರಾಜರನ್ನು (ಆ) ಮಾರಸಿಂಗಮಯ್ಯರನ್ನು

(ಇ) ಪುಣಿಸಮಯ್ಯರನ್ನು (ಈ) ಸಿಂಗಿಮಯ್ಯರನ್ನು

## *ನಾಟಕ – ಹೂವಿ*

## DRAMA - HOOVI

### *ಹೆಚ್.ಎಸ್. ವೆಂಕಟೇಶಮೂರ್ತಿ*

### (H.S. VENKATESH MURTHY)

**Question 6**

**Read the following questions carefully and choose the correct answer and put tick mark. (√)** **[10×1=10]**

***ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ. (√)***

(i) 'ಹೂವಿ' ನಾಟಕದ ಕರ್ತೃ ———

(ಅ) ಬಿ.ವಿ. ಶ್ರೀನಿವಾಸ ಮೂರ್ತಿ (ಆ) ಎಸ್. ವಾಸುದೇವಮೂರ್ತಿ

(ಇ) ಎಚ್.ಎಸ್. ವೆಂಕಟೇಶಮೂರ್ತಿ (ಈ) ಕೆ. ನಾರಾಯಣಮೂರ್ತಿ

(ii) ಬೆಳ್ಳಿ ಎಲ್ಲಿ ಆಟವಾಡುತ್ತಿದ್ದಳು?

(ಅ) ಮಾವಿನ ತೋಪಿನಲ್ಲಿ (ಆ) ಹೊನ್ನೆ ತೋಪಿನಲ್ಲಿ

(ಇ) ಹುಣಿಸೆ ತೋಪಿನಲ್ಲಿ (ಈ) ನೀಲಗಿರಿ ತೋಪಿನಲ್ಲಿ

(iii) ಹೊನ್ನ ಮತ್ತು ಕುದುರೆಯದ್ದು ಎಂತಹ ಸಂಬಂಧವಾಗಿತ್ತು?

(ಅ) ಶತ್ರು (ಆ) ಹಿತಶತ್ರು

(ಇ) ಸಹಪಾಠಿ (ಈ) ಗೆಳೆಯ

(iv) ಗೌಡರ ಮಗ ಹೊನ್ನನು ಕುದುರೆಯನ್ನು ಹಿಡಿದುಕೊಂಡು ಎಲ್ಲಿಗೆ ಬಂದನು?

(ಅ) ಬಯಲಿಗೆ (ಆ) ಊರಿಗೆ

(ಇ) ನಗರಕ್ಕೆ (ಈ) ಹಳ್ಳಿಗೆ

(v) ಹೂವಮ್ಮ ಆಡುತ್ತಿದ್ದ ಆಟ ————

(ಅ) ಚೆನ್ನೆಮಣೆ (ಆ) ಹಾವು ಏಣಿ

(ಇ) ಚೌಕಾಬಾರ (ಈ) ಕವಡೆ

(vi) ಪುಟ್ಟಿ ಯಾರನ್ನು ಹುಡುಕಿಕೊಂಡು ಬಂದಳು?

(ಅ) ಗೌಡರ ಮಗ (ಆ) ಹೂವಿ

(ಇ) ಗೆಳತಿ (ಈ) ಕುದುರೆ

(vii) ಪುಟ್ಟಿಯು ಹೂವನ್ನು ತೆಗೆದುಕೊಂಡು ———— ಹೊರಟಳು.

(ಅ) ಸಾಹುಕಾರನ ಮನೆಗೆ (ಆ) ಜಮೀನ್ದಾರನ ಮನೆಗೆ

(ಇ) ಗೌಡರ ಮನೆಗೆ (ಈ) ಸ್ನೇಹಿತೆಯ ಮನೆಗೆ

(viii) ಹೊನ್ನನು ಕಾಣದಿದ್ದಾಗ ಕುದುರೆಯು ಯಾರು ಯಾರನ್ನು ಕೇಳುತ್ತದೆ?

(ಅ) ಆಲಯ್ಯ, ಬೆಟ್ಟಯ್ಯ, ಮಲ್ಲಯ್ಯ (ಆ) ಹುತ್ತೇಗೌಡ, ಆಲಯ್ಯ, ಕಲ್ಲಪ್ಪ

(ಇ) ಹುತ್ತೇಗೌಡ, ಬೆಟ್ಟಯ್ಯ, ಸೋಮಯ್ಯ (ಈ) ಕಲ್ಲಪ್ಪ, ಮಲ್ಲಪ್ಪ, ರಾಮಪ್ಪ

(ix) ಹೂವನ್ನು ಹೂವಿನ ಮರ ಆಗುವುದನ್ನು ನೋಡಿದವರು ————

(ಅ) ಪುಟ್ಟಕ್ಕ (ಆ) ಸಖಿಯರು

(ಇ) ಬೆಳ್ಳಿ (ಈ) ಹೊನ್ನೆಗೌಡ

(x) ಹೊನ್ನ ಮತ್ತು ಹೂವಿಯ ಜೋಡಿಯನ್ನು ಯಾರಿಗೆ ಹೋಲಿಕೆ ಮಾಡಲಾಗಿದೆ?

(ಅ) ಶಿವ ಪಾರ್ವತಿಗೆ (ಆ) ಲಕ್ಷ್ಮಿ ವಿಷ್ಣುವಿಗೆ

(ಇ) ರತಿ ಮನ್ಮಥರಿಗೆ (ಈ) ಇಂದ್ರ ಶಚಿದೇವಿಗೆ